# ನೆನಪು ಮನುಷ್ಯ

ರಾಮಚಂದ್ರ ಚಿಕ್ಕಮಗಳೂರಿನಿಂದ ಲಿಂಗದಹಳ್ಳಿಯ ಕಡೆಗಿನ ರಸ್ತೆಗೆ ಕಾರು ತಿರುಗಿಸಿದ. ಸೋದರಮಾವನ ಮಗನ ಮದುವೆಗೆ ಅಂತ ಹೆಂಡತಿ ಕುಸುಮಳ ಜೊತೆ ಶಿವಮೊಗ್ಗಕ್ಕೆ ಹೊರಟಿದ್ದು. ಆವತ್ತು ರಾತ್ರಿಯೇ ವರಪೂಜೆ. ಮರುದಿನ ಮದುವೆ. ಕತ್ತಲಾಗುವ ಮೊದಲು ಅವರು ಊರು ಮುಟ್ಟಬೇಕಿತ್ತು. ಆ ದಿನ ಬೆಳಗ್ಗೆ ತಿಂಡಿ ಮುಗಿಸಿದ ಕೂಡಲೆ ಹೊರಡುವುದು ಅಂತ ನಿಗದಿಯಾಗಿತ್ತು. ಆದರೆ, ಬೆಳಗ್ಗೆ ಏಳು ಗಂಟೆಗೆ ಬಂದ ಸ್ನೇಹಿತನೊಬ್ಬನ ಕರೆಯು ತಂದ ಸುದ್ದಿ ಎಲ್ಲ ಯೋಜನೆಗಳನ್ನೂ ಅಡ್ಡಮಗುಚಿ ಬೇಗ ಹೊರಡುವುದು ಆಗಲಿಲ್ಲ. ಸಂತೋಷ ಹೃದಯಾಘಾತದಿಂದ ತೀರಿಕೊಂಡ ಸಮಾಚಾರ ಅದು. ದಿನಾಲು ಸಂಜೆ 'ಐದನೇ ಕ್ರಾಸ್'ನ ಕಲ್ಲುಬೆಂಚಿನ ಮೇಲೆ ಕುಳಿತು ಒಂದರಲ್ಲರ್ಧ ಟೀ ಕುಡಿಯುತ್ತ ಗಂಟೆಗಟ್ಟಲೆ ಲೋಕದ ವಿಚಾರಗಳನ್ನೆಲ್ಲ ಮಾತನಾಡುತ್ತಿದ್ದ ಗೆಳೆಯ ಅವನು. ವಿಷಯ ಕೇಳಿದವನೇ ರಾಮಚಂದ್ರ ದಂಗಾಗಿ ಕುಳಿತುಬಿಟ್ಟ. ಸಂತೋಷನ ಎಂದಿನ ನಗುಕಣ್ಣು ಎದೆಯಲ್ಲಿ ಸುಳಿದು ರಾಮಚಂದ್ರನಿಗೆ ಉಸಿರು ಕಟ್ಟಿದಂತಾಗಿ ಕಣ್ಣು ತುಂಬಿ ಬಂತು. ಅವನ ದುಃಖದ ಬಿಕ್ಕಳಿಕೆ ಕೇಳಿ ಅಡುಗೆಮನೆಯಲ್ಲಿದ್ದ ಕುಸುಮ ಗಾಬರಿಯಲ್ಲಿ ಓಡಿ ಬಂದಳು. ವಿಷಯ ಕೇಳಿದ ಅವಳಿಗೆ ಗಾಬರಿ, ಭಯವಾಯಿತು. 'ಅಯ್ಯೋ ಶಿವನೇ, ಹೋದ ವಾರ ತಾನೆ ಬಂದಿದ್ದರಲ್ಲ! ಅಷ್ಟು ಆರೋಗ್ಯವಾಗಿದ್ದರು... ಛೇ ಯಾಕೆ ಹೀಗಾಯ್ತು...' ಎಂದು ಗದ್ಗದಿಸುತ್ತ ಗಂಡನನ್ನು ಸಮಾಧಾನ ಮಾಡತೊಡಗಿದಳು. ರಾಮಚಂದ್ರ ಕುಸುಮಳ ತೆಕ್ಕೆಯಲ್ಲಿ ಬಿಕ್ಕಳಿಸಿ, ಕಂಪಿಸತೊಡಗಿದಂತೆ ಸಂತೋಷನ ಚಿತ್ರ ಅವನೊಳಗೆ ಮೂಡಿ ಮುಳುಗತೊಡಗಿತು: ಅಂಥ ಎತ್ತರದ ಆಳೇನಲ್ಲ. ಆದರೂ ಎದುರಿಗಿರುವವರನ್ನು ನೋಡುವಾಗ ತುಸು ಎತ್ತರದಲ್ಲಿದ್ದು ನಮ್ಮನ್ನು ಬಾಗಿ ನೋಡಬೇಕೇನೋ ಅನ್ನಿಸುತ್ತಿತ್ತು. ಅವನ ಹಸ್ತ ಚೆಲುವಾಗಿತ್ತು ಎನ್ನುವುದು ಸರಿ. ಆದರೆ, ಆ ಕೈಯಲ್ಲಿ ತಾನು ಏನನ್ನು ಬೇಕಾದರೂ ಸೃಷ್ಟಿಸಬಲ್ಲೆ ಎಂಬ ಆತ್ಮವಿಶ್ವಾಸ ತುಂಬಿ ತುಳುಕುತ್ತಿತ್ತು. ಸಂತೋಷನ ಆ ಮುಖ ಮಾತ್ರ ಜೀವದ ರಕ್ತವನ್ನೆಲ್ಲ ಮೂಗು ಕಿವಿಗೆ ತಂದುಕೊಂಡು ಸದಾ ನಾಚಿಕೋತಾ, ಸಂಕೋಚದಲ್ಲಿ ಅರೆಕಣ್ಣು ಮಾಡಿಕೊಂಡಿರುತ್ತಿದ್ದುದು ನೆನಪಾಗಿ ರಾಮಚಂದ್ರನ ಕರುಳಲ್ಲಿ ಸಂಕಟ ಪಕಪಕನಾಡಿತು. ತಾಯ ತಪ್ಪಿಹೋದ ಕರುವು